## ಕರ್ನಾಟಕ ಲೋಕಾಯುಕ್ತ

**ಸಂ.ಕಂಪ್ಲೇಂಟ್/ಉಪಲೋಕ್/ಬಿ.ಡಿ./2615/2022**
**ಪಿ.ಓ. ಎ.ಆರ್.ಇ–06**(ಮಂಡನಾಧಿಕಾರಿಗಳ ಶಾಖೆ).

ಬಹುಮಹಡಿಗಳ ಕಟ್ಟಡ,
ಡಾ॥ ಬಿ.ಆರ್. ಅಂಬೇಡ್ಕರ್ ವೀದಿ,
ಬೆಂಗಳೂರು ದಿನಾಂಕ: 06/03/2023.

**ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 12(3) ರ ಅನ್ವಯ ಶಿಫಾರಸ್ಸು ವರದಿ**

**ವಿಷಯ:** **ಡಾ॥ ಎಸ್.ವಿ. ನಾರಾಯಣಸ್ವಾಮಿ ಬಿನ್ ಲೇಟ್ ವೆಂಕಟರಮಣಪ್ಪ,** ಶಸ್ತ್ರ ಚಿಕಿತ್ಸಕರು, ಜಿಲ್ಲಾ ಆಸ್ಪತ್ರೆ, ರಾಮನಗರರವರು ಸರ್ಕಾರಿ ಕರ್ತವ್ಯ ನಿರ್ವಹಿಸುವ ಕಾಲಕ್ಕೆ ದುರ್ನಡತೆ / ದುರ್ವರ್ತನೆ ತೋರಿದ ಕುರಿತಂತೆ ಕ್ರಮ ಜರುಗಿಸುವ ಬಗ್ಗೆ.

****

ರಾಮನಗರ ಭ್ರಷ್ಟಾಚಾರ ನಿಗ್ರಹದಳ ಪೊಲೀಸ್ ಠಾಣೆಯ ಪೊಲೀಸ್ ನಿರೀಕ್ಷಕರು (ಇನ್ನು ಮುಂದೆ 'ತನಿಖಾಧಿಕಾರಿ' ಎಂದು ಕರೆಯಲ್ಪಡುತ್ತಾರೆ) ಇವರು ಸಲ್ಲಿಸಿದ ತನಿಖಾ ವರದಿ ಮತ್ತು ದಾಖಲೆಗಳನ್ನು ಪರಿಶೀಲಿಸಲಾಗಿ **ಡಾ॥ ಎಸ್.ವಿ. ನಾರಾಯಣಸ್ವಾಮಿ ಬಿನ್ ಲೇಟ್ ವೆಂಕಟರಮಣಪ್ಪ,** ಶಸ್ತ್ರ ಚಿಕಿತ್ಸಕರು, ಜಿಲ್ಲಾ ಆಸ್ಪತ್ರೆ, ರಾಮನಗರ (ಇನ್ನು ಮುಂದೆ 'ಎದುರುದಾರರು' ಎಂದು ಕರೆಯಲ್ಪಡುತ್ತಾರೆ). **ಶ್ರೀ. ಗೋಪಿ ಬಿನ್ ವೆಂಕಟದಾಸಯ್ಯ, ವ್ಯವಸಾಯ, ಜಯಪುರ ಗ್ರಾಮ, ರಾಮನಗರ ತಾಲ್ಲೂಕು** (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ಇವರ ಚಿಕ್ಕಮ್ಮ ಶ್ರೀಮತಿ. ಸಿದ್ದಮ್ಮನ ಆಪರೇಷನ್ ಮಾಡಿಸಲು ಎದುರುದಾರರನ್ನು ಭೇಟಿಮಾಡಿದಾಗ ಅವರು 8,000/– ರೂ. ಲಂಚದ ಹಣಕ್ಕೆ ಬೇಡಿಕೆ ಇಟ್ಟು, 5,000/– ರೂ.ಗಳನ್ನು ಸ್ವೀಕರಿಸಿ, ನಂತರ ಉಳಿದ ಹಣಕ್ಕೆ ಬೇಡಿಕೆಯಿಟ್ಟು ದುರ್ನಡತೆ ತೋರಿಸಿರುತ್ತಾರೆ ಎಂದು ತನಿಖಾಧಿಕಾರಿಯವರು ವರದಿ ಸಲ್ಲಿಸಿದ ಮೇರೆಗೆ ತನಿಖಾ ದಾಖಲಾತಿಗಳನ್ನು ಪರಿಶೀಲಿಸಿದಾಗ ಎದುರುದಾರರು ಅವರ ಸೇವಾ ಅವಧಿಯಲ್ಲಿ ದುರ್ನಡತೆ ತೋರಿಸಿರುವುದು ಕಂಡು ಬಂದಿದ್ದರಿಂದ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 7(2)ರಡಿಯಲ್ಲಿ ಸ್ವಯಂ ಪ್ರೇರಿತ ದೂರು ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ.

2. **ಪ್ರಕರಣದ ಸಂಕ್ಷಿಪ್ತ ಸಾರಾಂಶ :–**

i) ದೂರುದಾರರಾದ **ಶ್ರೀ. ಗೋಪಿ ಬಿನ್ ವೆಂಕಟದಾಸಯ್ಯ**ನವರ ಚಿಕ್ಕಮ್ಮನಾದ ಸಿದ್ದಮ್ಮ ಕೋಂ ಚಿನ್ನಗಿರಿಯಯ್ಯರವರನ್ನು ಹೊಟ್ಟೆನೋವು ಕಾರಣಕ್ಕೆ ದಿ: 26/12/2019

ರಂದು ರಾಮನಗರ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಮಹಿಳಾ ವೈದ್ಯರಲ್ಲಿ ಹೊರರೋಗಿಯಾಗಿ ಚಿಕಿತ್ಸೆಕೊಡಿಸಿ, ಶಸ್ತ್ರಚಿಕಿತ್ಸಕರಾದ ಎದುರುದಾರರ ಬಳಿ ಸ್ಕ್ಯಾನಿಂಗ್ ವರದಿ ತೋರಿಸಿದಾಗ ಅಪೆಂಡಿಕ್ಸ್ ಆಗಿರುವುದಾಗಿ ಇಂದೇ ಆಪರೇಷನ್ ಮಾಡಬೇಕೆಂದು ಆಪರೇಷನ್ ಮಾಡಲು 8,000/– ರೂ. ಲಂಚಕ್ಕೆ ಬೇಡಿಕೆ ಇಟ್ಟು ನಾಳೆ ಬರಲು ತಿಳಿಸಿರುತ್ತಾರೆ. ದಿನಾಂಕ: 27/12/2019 ರಂದು ದೂರುದಾರರ ಚಿಕ್ಕಮ್ಮನನ್ನು ಸರ್ಕಾರಿ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ಸೇರಿಸಿ, ಎದುರುದಾರರನ್ನು ಭೇಟಿಮಾಡಿದ ವೇಳೆಯಲ್ಲಿ ಆಪರೇಷನ್ ಮಾಡಲು ಹಣಕೊಡಲೇ ಬೇಕೆಂದು ಒತ್ತಾಯಿಸಿದ ಮೇರೆಗೆ ದೂರುದಾರರ ಚಿಕ್ಕಮ್ಮನ ಮಗ ಪ್ರಸನ್ನರವರು 5,000/– ರೂ. ಮುಂಗಡ ಹಣ ನೀಡಿದ್ದು, ಅದೇ ದಿನ ಸಿದ್ದಮ್ಮನವರಿಗೆ ಆಪರೇಷನ್ ಮಾಡಿ ಉಳಿದ ಹಣವನ್ನು ಡಿಸ್‌ಚಾರ್ಜ್ ಮಾಡುವ ಸಮಯದಲ್ಲಿ ನೀಡುವಂತೆ ಒತ್ತಾಯಿಸಿರುತ್ತಾರೆ. ದಿನಾಂಕ: 30/12/2019 ರಂದು ಸಂಜೆ 4.00 ಗಂಟೆಗೆ ದೂರುದಾರರು ಎದುರುದಾರರನ್ನು ಭೇಟಿಮಾಡಿ ಸಿದ್ದಮ್ಮನವರ ಡಿಸ್‌ಚಾರ್ಜ್ ಮಾಡುವ ಬಗ್ಗೆ ಕೇಳಿದಾಗ ನಾಳೆ ಮಾಡುವುದಾಗಿ ತಿಳಿಸಿ, ಬೇಡಿಕೆಯಿಟ್ಟ ಲಂಚದ ಹಣ ತಂದಿದ್ದೀಯಾ ಎಂದು ಕೇಳಿದಾಗ, ದೂರುದಾರರು ನಾಳೆ ಉಳಿದ 2,000/– ರೂ. ಕೊಡುವುದಾಗಿ ಹೇಳಿದಾಗ ಇನ್ನೂ 5,000/– ರೂ. ಲಂಚದ ಹಣಕ್ಕೆ ಒತ್ತಾಯಿಸಿರುತ್ತಾರೆ. ಆಗ ದೂರುದಾರರು ಅವರ ಮೊಬೈಲ್‌ನಲ್ಲಿ ಸದರಿ ಸಂಭಾಷಣೆಯನ್ನು ಧ್ವನಿ ಮುದ್ರಿಸಿಕೊಂಡಿರುತ್ತಾರೆ. ದೂರುದಾರರಿಗೆ ಲಂಚದ ಹಣಕೊಡಲು ಇಷ್ಟವಿಲ್ಲದ್ದರಿಂದ ದಿ: 31/12/2019 ರಂದು ಪೊಲೀಸ್ ಉಪಾಧೀಕ್ಷಕರು, ಭ್ರಷ್ಟಾಚಾರ ನಿಗ್ರಹದಳ, ರಾಮನಗರ ಪೊಲೀಸ್ ಠಾಣೆಗೆ ಲಿಖಿತ ದೂರನ್ನು ಸಲ್ಲಿಸಿರುತ್ತಾರೆ. ಸದರಿ ಠಾಣೆಯ ಠಾಣಾಧಿಕಾರಿಗಳು ಅವರ ಠಾಣೆಯ ಗುನ್ನೆ ನಂ.15/2019 ರಲ್ಲಿ ಕಲಂ 7(ಎ) ಭ್ರಷ್ಟಾಚಾರ ನಿಗ್ರಹ ಕಾಯ್ದೆ 1988 (ತಿದ್ದುಪಡಿ ಕಾಯ್ದೆ, 2018) ರಡಿಯಲ್ಲಿ ಎದುರುದಾರರ ವಿರುದ್ಧ ಪ್ರಕರಣ ದಾಖಲಿಸಿಕೊಂಡಿರುತ್ತಾರೆ.

ii) ದಿನಾಂಕ: 31/12/2019 ರಂದು ತನಿಖಾಧಿಕಾರಿಗಳು ಜಪ್ತಿಪೂರ್ವ ಪಂಚನಾಮೆ ಸಮಯದಲ್ಲಿ ಪಂಚಸಾಕ್ಷಿದಾರರಾದ (1) ಶ್ರೀ. ರವೀಶ್ ಎಸ್.ಕೆ. ಬಿನ್ ಕೆಂಗಲಯ್ಯ, ಪ್ರ.ದ.ಸ., ಸಾರ್ವಜನಿಕ ಶಿಕ್ಷಣ ಇಲಾಖೆ, ನಿಯೋಜನೆ ಮೇಲೆ ತಾಲ್ಲೂಕು ಪಂಚಾಯಿತಿ, ರಾಮನಗರ ಮತ್ತು (2) ಶ್ರೀ. ಸಾಗರ್ ವಿ. ಬಿನ್ ಲೇಟ್ ವೆಂಕಟೇಶ್ ಎಂ.ಆರ್, ದ್ವಿ.ದ.ಸ., ಕೆ.ಜಿ.ಐ.ಡಿ. ಇಲಾಖೆ, ರಾಮನಗರ ಇವರುಗಳನ್ನು ಠಾಣೆಗೆ ಕರೆಯಿಸಿ ದೂರುದಾರರನ್ನು ಪರಿಚಯಿಸಿ, ದೂರಿನ ಅಂಶಗಳನ್ನು ಅವರಿಗೆ ತಿಳಿಸಿದ ನಂತರ ಪಂಚರಾಗಿ ಸಹಕರಿಸಲು ಒಪ್ಪಿರುತ್ತಾರೆ. ನಂತರ, ದೂರುದಾರರು ಲಂಚದ

ಹಣಕ್ಕೆ ಬೇಡಿಕೆ ಇಟ್ಟ ಸಂಭಾಷಣೆಯನ್ನು ಧ್ವನಿ ಮುದ್ರಿಸಿಕೊಂಡಿದ್ದ ಮೊಬೈಲ್‌ನ್ನು ತನಿಖಾಧಿಕಾರಿಯವರ ಮುಂದೆ ಹಾಜರುಪಡಿಸಿದ್ದು, ಅವರು ಅದರಲ್ಲಿರುವ ಸಂಭಾಷಣೆಯನ್ನು ಎಲ್ಲರಿಗೂ ಕೇಳಿಸಿ, ಆ ಸಂಭಾಷಣೆಯನ್ನು ಪಂಚನಾಮೆಯಲ್ಲಿ ಲಿಪಿಕರಣಗೊಳಿಸಿ, ನಂತರ ಕಂಪ್ಯೂಟರ್ ಮೂಲಕ ಸಿ.ಡಿ.ಗೆ ವರ್ಗಾಯಿಸಿ, ಆ ಸಿ.ಡಿಯನ್ನು (ಆರ್ಟಿಕಲ್–1) ವಶಕ್ಕೆ ಪಡೆದಿರುತ್ತಾರೆ. ತನಿಖಾಧಿಕಾರಿಯವರು ಆರ್ಟಿಕಲ್–1ರ ತದ್ರೂಪಿ ಸಿ.ಡಿ.ಯನ್ನು ತಯಾರಿಸಿ ಅವರ ವಶದಲ್ಲಿಟ್ಟುಕೊಂಡಿರುತ್ತಾರೆ. ತನಿಖಾಧಿಕಾರಿಯವರು ದೂರುದಾರರಿಗೆ ಎದುರುದಾರರು ಬೇಡಿಕೆಯಿಟ್ಟ ಲಂಚದ ಹಣವನ್ನು ಹಾಜರುಪಡಿಸುವಂತೆ ತಿಳಿಸಿದಾಗ, ದೂರುದಾರರು 3,000/– ರೂ. ಮೌಲ್ಯದ 500/– ರೂ. ಮುಖಬೆಲೆಯ 6 ನೋಟುಗಳನ್ನು ಹಾಜರುಪಡಿಸಿದ್ದು, ತನಿಖಾಧಿಕಾರಿಯವರ ಸೂಚನೆಯಂತೆ ಪಂಚಸಾಕ್ಷಿ–2 ಶ್ರೀ. ಸಾಗರ್ ವಿ. ರವರು ನೋಟುಗಳ ವಿವರಗಳನ್ನು ಹೇಳಿದಂತೆ ಸಿಬ್ಬಂದಿ ಪಂಚನಾಮೆಯಲ್ಲಿ ಮತ್ತು ಹಾಳೆಯಲ್ಲಿ ನಮೂದಿಸಿರುತ್ತಾರೆ. ತನಿಖಾಧಿಕಾರಿಯವರ ಸೂಚನೆ ಮೇರೆಗೆ ಸಿಬ್ಬಂದಿ ಸದರಿ ನೋಟುಗಳಿಗೆ ಫಿನಾಫ್ತಲಿನ್ ಪುಡಿಯನ್ನು ಲೇಪಿಸಿದ ನಂತರ, ಪಂಚಸಾಕ್ಷಿ–2 ಶ್ರೀ. ಸಾಗರ್ ವಿ. ರವರ ಮುಖಾಂತರ ದೂರುದಾರರ ಶರ್ಟಿನ ಎಡಜೇಬಿನಲ್ಲಿ ಇಡಿಸಿರುತ್ತಾರೆ. ತನಿಖಾಧಿಕಾರಿಯವರು ದೂರುದಾರರಿಗೆ ಧ್ವನಿಮುದ್ರಕವನ್ನು ನೀಡಿ ಎದುರುದಾರರ ಬಳಿ ಹೋಗುವಾಗ ಚಾಲನಾ ಸ್ಥಿತಿಯಲ್ಲಿಟ್ಟುಕೊಳ್ಳುವಂತೆ ಮತ್ತು ಎದುರುದಾರರು ಲಂಚದ ಹಣ ಕೇಳಿದರೆ ಪುಡಿಲೇಪಿತ ಹಣವನ್ನು ಕೊಡುವುದು ಮತ್ತು ಅದನ್ನು ಸ್ವೀಕರಿಸಿದರೆ, ಹೊರಬಂದು ಕೈಗಳಿಂದ ತಲೆ ಸವರಿಕೊಳ್ಳುವ ಮೂಲಕ ಸೂಚನೆ ನೀಡುವಂತೆ ತಿಳಿಸಿರುತ್ತಾರೆ ಹಾಗೂ ಪಂಚಸಾಕ್ಷಿ–1 ಶ್ರೀ. ರವೀಶ್‌ರವರಿಗೆ ದೂರುದಾರರು ಮತ್ತು ಎದುರುದಾರರ ನಡುವೆ ನಡೆಯುವ ವಿದ್ಯಮಾನಗಳನ್ನು ಗಮನಿಸುವಂತೆ ತಿಳಿಸಿ, ಎಲ್ಲರ ಸಮಕ್ಷಮ ಪ್ರಾಯೋಗಿಕಾ ಪಂಚನಾಮೆಯನ್ನು ನಿರ್ವಹಿಸಿರುತ್ತಾರೆ.

iii) ದಿನಾಂಕ: 31/12/2019 ರಂದು ದೂರುದಾರರು, ನೆರಳುಸಾಕ್ಷಿ ಮತ್ತು ಪಂಚಸಾಕ್ಷಿ ಹಾಗೂ ಸಿಬ್ಬಂದಿಗಳೊಂದಿಗೆ ತನಿಖಾಧಿಕಾರಿಯವರು ಮಧ್ಯಾಹ್ನ ಸುಮಾರು 12.55 ಗಂಟೆಗೆ ರಾಮನಗರ ಜಿಲ್ಲಾ ಆಸ್ಪತ್ರೆಯ ಬಳಿ ಬಂದಿರುತ್ತಾರೆ. ತನಿಖಾಧಿಕಾರಿಯವರು ದೂರುದಾರರಿಗೆ ಮತ್ತು ನೆರಳುಸಾಕ್ಷಿಗೆ ಸೂಚನೆಗಳನ್ನು ನೆನಪಿಸಿ ಕಳುಹಿಸಿಕೊಟ್ಟಿದ್ದು, ದೂರುದಾರರು ಮತ್ತು ನೆರಳುಸಾಕ್ಷಿ 1ನೇ ಮಹಡಿಯಲ್ಲಿದ್ದ ಅವರ ಚಿಕ್ಕಮ್ಮನ ವಾರ್ಡ್‌ಗೆ ಹೋಗಿ ನೋಡಿದಾಗ, ಚಿಕ್ಕಮ್ಮನವರು ವಾರ್ಡ್‌ನಲ್ಲಿ ಇರದ ಕಾರಣ ನರ್ಸ್‌ರವರನ್ನು ವಿಚಾರಿಸಿದಾಗ ಅರ್ಧಗಂಟೆಗೂ ಮುನ್ನ ಡಿಸ್‌ಚಾರ್ಜ್

ಹಣಕ್ಕೆ ಬೇಡಿಕೆ ಇಟ್ಟ ಸಂಭಾಷಣೆಯನ್ನು ಧ್ವನಿ ಮುದ್ರಿಸಿಕೊಂಡಿದ್ದ ಮೊಬೈಲ್‌ನ್ನು ತನಿಖಾಧಿಕಾರಿಯವರ ಮುಂದೆ ಹಾಜರುಪಡಿಸಿದ್ದು, ಅವರು ಅದರಲ್ಲಿರುವ ಸಂಭಾಷಣೆಯನ್ನು ಎಲ್ಲರಿಗೂ ಕೇಳಿಸಿ, ಆ ಸಂಭಾಷಣೆಯನ್ನು ಪಂಚನಾಮೆಯಲ್ಲಿ ಲಿಪಿಕರಣಗೊಳಿಸಿ, ನಂತರ ಕಂಪ್ಯೂಟರ್ ಮೂಲಕ ಸಿ.ಡಿ.ಗೆ ವರ್ಗಾಯಿಸಿ, ಆ ಸಿ.ಡಿಯನ್ನು (ಆರ್ಟಿಕಲ್–1) ವಶಕ್ಕೆ ಪಡೆದಿರುತ್ತಾರೆ. ತನಿಖಾಧಿಕಾರಿಯವರು ಆರ್ಟಿಕಲ್–1ರ ತದ್ರೂಪಿ ಸಿ.ಡಿ.ಯನ್ನು ತಯಾರಿಸಿ ಅವರ ವಶದಲ್ಲಿಟ್ಟುಕೊಂಡಿರುತ್ತಾರೆ. ತನಿಖಾಧಿಕಾರಿಯವರು ದೂರುದಾರರಿಗೆ ಎದುರುದಾರರು ಬೇಡಿಕೆಯಿಟ್ಟ ಲಂಚದ ಹಣವನ್ನು ಹಾಜರುಪಡಿಸುವಂತೆ ತಿಳಿಸಿದಾಗ, ದೂರುದಾರರು 3,000/– ರೂ. ಮೌಲ್ಯದ 500/– ರೂ. ಮುಖಬೆಲೆಯ 6 ನೋಟುಗಳನ್ನು ಹಾಜರುಪಡಿಸಿದ್ದು, ತನಿಖಾಧಿಕಾರಿಯವರ ಸೂಚನೆಯಂತೆ ಪಂಚಸಾಕ್ಷಿ–2 ಶ್ರೀ. ಸಾಗರ್ ವಿ. ರವರು ನೋಟುಗಳ ವಿವರಗಳನ್ನು ಹೇಳಿದಂತೆ ಸಿಬ್ಬಂದಿ ಪಂಚನಾಮೆಯಲ್ಲಿ ಮತ್ತು ಹಾಳೆಯಲ್ಲಿ ನಮೂದಿಸಿರುತ್ತಾರೆ. ತನಿಖಾಧಿಕಾರಿಯವರ ಸೂಚನೆ ಮೇರೆಗೆ ಸಿಬ್ಬಂದಿ ಸದರಿ ನೋಟುಗಳಿಗೆ ಫಿನಾಫ್ತಲಿನ್ ಪುಡಿಯನ್ನು ಲೇಪಿಸಿದ ನಂತರ, ಪಂಚಸಾಕ್ಷಿ–2 ಶ್ರೀ. ಸಾಗರ್ ವಿ. ರವರ ಮುಖಾಂತರ ದೂರುದಾರರ ಶರ್ಟಿನ ಎಡಜೇಬಿನಲ್ಲಿ ಇಡಿಸಿರುತ್ತಾರೆ. ತನಿಖಾಧಿಕಾರಿಯವರು ದೂರುದಾರರಿಗೆ ಧ್ವನಿಮುದ್ರಕವನ್ನು ನೀಡಿ ಎದುರುದಾರರ ಬಳಿ ಹೋಗುವಾಗ ಚಾಲನಾ ಸ್ಥಿತಿಯಲ್ಲಿಟ್ಟುಕೊಳ್ಳುವಂತೆ ಮತ್ತು ಎದುರುದಾರರು ಲಂಚದ ಹಣ ಕೇಳಿದರೆ ಪುಡಿಲೇಪಿತ ಹಣವನ್ನು ಕೊಡುವುದು ಮತ್ತು ಅದನ್ನು ಸ್ವೀಕರಿಸಿದರೆ, ಹೊರಬಂದು ಕೈಗಳಿಂದ ತಲೆ ಸವರಿಕೊಳ್ಳುವ ಮೂಲಕ ಸೂಚನೆ ನೀಡುವಂತೆ ತಿಳಿಸಿರುತ್ತಾರೆ ಹಾಗೂ ಪಂಚಸಾಕ್ಷಿ–1 ಶ್ರೀ. ರವೀಶ್‌ರವರಿಗೆ ದೂರುದಾರರು ಮತ್ತು ಎದುರುದಾರರ ನಡುವೆ ನಡೆಯುವ ವಿದ್ಯಮಾನಗಳನ್ನು ಗಮನಿಸುವಂತೆ ತಿಳಿಸಿ, ಎಲ್ಲರ ಸಮಕ್ಷಮ ಪ್ರಾಯೋಗಿಕಾ ಪಂಚನಾಮೆಯನ್ನು ನಿರ್ವಹಿಸಿರುತ್ತಾರೆ.

**iii)** ದಿನಾಂಕ: 31/12/2019 ರಂದು ದೂರುದಾರರು, ನೆರಳುಸಾಕ್ಷಿ ಮತ್ತು ಪಂಚಸಾಕ್ಷಿ ಹಾಗೂ ಸಿಬ್ಬಂದಿಗಳೊಂದಿಗೆ ತನಿಖಾಧಿಕಾರಿಯವರು ಮಧ್ಯಾಹ್ನ ಸುಮಾರು 12.55 ಗಂಟೆಗೆ ರಾಮನಗರ ಜಿಲ್ಲಾ ಆಸ್ಪತ್ರೆಯ ಬಳಿ ಬಂದಿರುತ್ತಾರೆ. ತನಿಖಾಧಿಕಾರಿಯವರು ದೂರುದಾರರಿಗೆ ಮತ್ತು ನೆರಳುಸಾಕ್ಷಿಗೆ ಸೂಚನೆಗಳನ್ನು ನೆನಪಿಸಿ ಕಳುಹಿಸಿಕೊಟ್ಟಿದ್ದು, ದೂರುದಾರರು ಮತ್ತು ನೆರಳುಸಾಕ್ಷಿ 1ನೇ ಮಹಡಿಯಲ್ಲಿದ್ದ ಅವರ ಚಿಕ್ಕಮ್ಮನ ವಾರ್ಡ್‌ಗೆ ಹೋಗಿ ನೋಡಿದಾಗ, ಚಿಕ್ಕಮ್ಮನವರು ವಾರ್ಡ್‌ನಲ್ಲಿ ಇರದ ಕಾರಣ ನರ್ಸ್‌ರವರನ್ನು ವಿಚಾರಿಸಿದಾಗ ಅರ್ಧಗಂಟೆಗೂ ಮುನ್ನ ಡಿಸ್‌ಚಾರ್ಜ್

ಆಗಿರುತ್ತಾರೆಂದು ತಿಳಿಸಿರುತ್ತಾರೆ. ದೂರುದಾರರು ನೆರಳುಸಾಕ್ಷಿಯೊಂದಿಗೆ ನೆಲಮಹಡಿಗೆ ಬಂದು ಎದುರುದಾರರನ್ನು ಬೇಟಿಮಾಡಿದಾಗ ಅವರು ಈಗತಾನೇ ಡಿಸ್‌ಚಾರ್ಜ್ ಮಾಡಿದ್ದೇನೆ ಎಂದು ಹೇಳಿ, ಸಿದ್ದಮ್ಮನವರ ಮಗಳು 2,000/- ರೂ. ಮಾತ್ರ ಕೊಟ್ಟಿರುತ್ತಾರೆ, ಬಾಕಿ ಹಣಕೊಡುವಂತೆ ಕೇಳಿದಾಗ ದೂರುದಾರರು ಅವರ ಬಳಿಯಿದ್ದ ಪುಡಿಲೇಪಿತ ನೋಟುಗಳಲ್ಲಿ 1,500/-ರೂ.ಅನ್ನು ನೀಡಿದಾಗ ಎದುರುದಾರರು ಅವರ ಬಲಗೈನಲ್ಲಿ ಪಡೆದು ಎಣಿಸಿಕೊಂಡು ಅವರ ಪ್ಯಾಂಟಿನ ಹಿಂದಿನ ಬಲಜೇಬಿನಲ್ಲಿಟ್ಟುಕೊಂಡಿರುತ್ತಾರೆ. ಉಳಿದ 1,500/- ರೂ.ಗಳನ್ನು ದೂರುದಾರರು ಅವರ ಶರ್ಟಿನ ಜೇಬಿನಲ್ಲಿಟ್ಟುಕೊಂಡಿರುತ್ತಾರೆ. ಎದುರುದಾರರು ಒಂದುವಾರ ಬಿಟ್ಟು ಸ್ಕ್ಯಾನಿಂಗ್‌ಗೆ ಬರುವಂತೆ ತಿಳಿಸಿರುತ್ತಾರೆ. ದೂರುದಾರರು ಎದುರುದಾರರ ಕೊಠಡಿಯಿಂದ ಹೊರಬಂದು ತಲೆಸವರಿಕೊಳ್ಳುವ ಮೂಲಕ ಸೂಚನೆ ನೀಡಿದ ಮೇರೆಗೆ ತನಿಖಾಧಿಕಾರಿಗಳು ದೂರುದಾರರ ಬಳಿಬಂದಿದ್ದು, ದೂರುದಾರರು ತೋರಿಸಿದ ಎದುರುದಾರರಿಗೆ ಗುರುತಿನ ಚೀಟಿಯನ್ನು ತೋರಿಸಿ ಟ್ರ್ಯಾಪ್ ಆದ ಬಗ್ಗೆ ತಿಳಿಸಿರುತ್ತಾರೆ. ಅದೇ ಸಮಯಕ್ಕೆ ಜಿಲ್ಲಾ ಶಸ್ತ್ರಚಿಕಿತ್ಸಕರಾದ ಡಾ॥ ವಿಜಯನರಸಿಂಹರವರು ಆಗಮಿಸಿದ್ದು, ತನಿಖಾಧಿಕಾರಿಯವರು ಅವರಿಗೆ ಪ್ರಕರಣದ ಬಗ್ಗೆ ವಿವರಿಸಿ ತನಿಖೆಗೆ ಸಹಕರಿಸುವಂತೆ ಕೋರಿಕೊಂಡಾಗ ಅವರು ಒಪ್ಪಿಕೊಂಡಿರುತ್ತಾರೆ.

iv) ತನಿಖಾಧಿಕಾರಿಯವರ ಸೂಚನೆ ಮೇರೆಗೆ ಸಿಬ್ಬಂದಿಯು ಸೋಡಿಯಂ ಕಾರ್ಬೋನೇಟ್ ದ್ರಾವಣವನ್ನು ತಯಾರಿಸಿ ಎರಡು ಪ್ರತ್ಯೇಕ ಬಟ್ಟಲುಗಳಲ್ಲಿ ತೆಗೆದುಕೊಂಡು, ಒಂದು ಬಟ್ಟಲಿನಲ್ಲಿದ್ದ ದ್ರಾವಣದಲ್ಲಿ ಎದುರುದಾರರ ಬಲಗೈ ಬೆರಳುಗಳನ್ನು ಅದ್ದಿಸಿ ತೊಳೆಸಿದಾಗ ದ್ರಾವಣವು ಗುಲಾಬಿಬಣ್ಣಕ್ಕೆ ತಿರುಗಿರುತ್ತದೆ. ಇನ್ನೊಂದು ಬಟ್ಟಲಿನಲ್ಲಿದ್ದ ದ್ರಾವಣದಲ್ಲಿ ಎಡಗೈ ಬೆರಳುಗಳನ್ನು ಅದ್ದಿಸಿ ತೊಳೆಸಿದಾಗ ಆ ದ್ರಾವಣವು ಗುಲಾಬಿಬಣ್ಣಕ್ಕೆ ತಿರುಗಿರುತ್ತದೆ. ತನಿಖಾಧಿಕಾರಿಯವರು ಆ ದ್ರಾವಣಗಳನ್ನು ಪ್ರತ್ಯೇಕವಾಗಿ ವಶಕ್ಕೆ ಪಡೆದಿರುತ್ತಾರೆ.

v) ತನಿಖಾಧಿಕಾರಿಯವರು ಎದುರುದಾರರಿಗೆ ದೂರುದಾರರಿಂದ ಪಡೆದುಕೊಂಡ ಲಂಚದ ಹಣವನ್ನು ಹಾಜರುಪಡಿಸುವಂತೆ ತಿಳಿಸಿದಾಗ ಅವರು ಅವರ ಪ್ಯಾಂಟಿನ ಹಿಂದಿನ ಜೇಬಿನಲ್ಲಿ ಇಟ್ಟುಕೊಂಡಿರುವುದಾಗಿ ತಿಳಿಸಿದ ಮೇರೆಗೆ ತನಿಖಾಧಿಕಾರಿಯವರ ಸೂಚನೆಯಂತೆ ಪಂಚಸಾಕ್ಷಿ-1 ಶ್ರೀ. ಎಸ್.ಕೆ. ರವೀಶರವರ ಮುಖಾಂತರ ಸದರಿ ನೋಟುಗಳನ್ನು ತೆಗೆಸಿ, ಆ ನೋಟುಗಳ ವಿವರಗಳನ್ನು ಪ್ರಾಯೋಗಿಕ ಪಂಚನಾಮೆ ಸಮಯದಲ್ಲಿ ನಮೂದಿಸಿಕೊಂಡಿದ್ದ ನೋಟುಗಳ

ವಿವರಗಳಿಗೆ ತಾಳೆಮಾಡಿ ನೋಡಿದಾಗ, ಆ ನೋಟುಗಳ ವಿವರಗಳು ತಾಳೆಯಾದ್ದರಿಂದ ತನಿಖಾಧಿಕಾರಿಯವರು ಆ ನೋಟುಗಳನ್ನು ವಶಕ್ಕೆ ಪಡೆದಿರುತ್ತಾರೆ. ದೂರುದಾರರು ಅವರಿಗೆ ನೀಡಿದ್ದ 3,000/- ರೂ. ಪುಡಿಲೇಪಿತ ನೋಟುಗಳಲ್ಲಿ 1,500/- ರೂ.ಗಳನ್ನು ಎದುರುದಾರರಿಗೆ ನೀಡಿದ್ದು, ಉಳಿದ 1,500/- ರೂ.ಗಳನ್ನು ದೂರುದಾರರು ಅವರ ಜೇಬಿನಲ್ಲಿಟ್ಟುಕೊಂಡಿರುವುದಾಗಿ ತಿಳಿಸಿದ ಮೇರೆಗೆ ಪಂಚಸಾಕ್ಷಿ-2 ಶ್ರೀ. ಸಾಗರ್ ವಿ. ರವರ ಮುಖಾಂತರ ಸದರಿ ನೋಟುಗಳನ್ನು ತೆಗೆಸಿ, ಪ್ರಾಯೋಗಿಕ ಪಂಚನಾಮೆ ಸಮಯದಲ್ಲಿ ಬರೆದುಕೊಂಡಿದ್ದ ನೋಟುಗಳ ವಿವರಗಳಿಗೆ ತಾಳೆಮಾಡಿ ನೋಡಿದಾಗ, ಆ ನೋಟುಗಳ ವಿವರಗಳು ತಾಳೆಯಾದ್ದರಿಂದ ತನಿಖಾಧಿಕಾರಿಯವರು ಆ ನೋಟುಗಳನ್ನು ವಶಕ್ಕೆ ಪಡೆದಿರುತ್ತಾರೆ.

vi) ತನಿಖಾಧಿಕಾರಿಯವರು ಎದುರುದಾರರಿಗೆ ಬದಲಿ ಪ್ಯಾಂಟಿನ ವ್ಯವಸ್ಥೆಮಾಡಿ ಅವರ ಪ್ಯಾಂಟಿನ ಎಡಜೇಬನ್ನು ಸೋಡಿಯಂ ಕಾರ್ಬೋನೆಟ್ ದ್ರಾವಣದಲ್ಲಿ ಅದ್ದಿಸಿದಾಗ ಆ ದ್ರಾವಣವು ತಿಳಿಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆ. ಪ್ಯಾಂಟನ್ನು ಮತ್ತು ದ್ರಾವಣವನ್ನು ತನಿಖಾಧಿಕಾರಿಯವರು ವಶಕ್ಕೆ ಪಡೆದಿರುತ್ತಾರೆ.

vii) ತನಿಖಾಧಿಕಾರಿಯವರು ಎದುರುದಾರರಿಗೆ ಅವರ ಬಳಿ ದೊರೆತ ಹಣಕ್ಕೆ ಸಮಜಾಯಿಷಿ ಬರೆದುಕೊಡುವಂತೆ ತಿಳಿಸಿದಾಗ ಎದುರುದಾರರು ಅವರ ಸಮಜಾಯಿಷಿಯಲ್ಲಿ "ದಿನಾಂಕ 27/12/2019 ರಂದು ಸಿದ್ದಮ್ಮರವರಿಗೆ ಅಪೆಂಡಿಕ್ಸ್ ರೋಗಬಂದು ಸರ್ಜರಿಯನ್ನು ದಿ: 27/12/2019 ರಂದು ಮಾಡಲಾಗಿದೆ. ಸದರಿ ರೋಗಿಯನ್ನು ದಿ: 31/12/2019 ರಂದು 9.30 ಗಂಟೆಗೆ ಡಿಸ್‌ಚಾರ್ಜ್ ಮಾಡಲಾಗಿದೆ. ಆದರೆ ಅವರ ಮಗ ಸುಮಾರು ಮಧ್ಯಾಹ್ನ 1.00 ಗಂಟೆ ಸಮಯದಲ್ಲಿ ಬಂದು ಒತ್ತಡದಿಂದ ನನ್ನ ಪ್ಯಾಂಟಿನ ಬಲಜೇಬಿಗೆ ಹಣವನ್ನು ಇಟ್ಟಿರುತ್ತಾನೆ. ನಾನು ನನ್ನ ಕೆಲಸವನ್ನು ತೃಪ್ತಿಕರವಾಗಿ ಮಾಡಿ ಈ ದಿವಸ ರೋಗಿಯನ್ನು ಡಿಸ್‌ಚಾರ್ಜ್ ಮಾಡಿರುತ್ತೇನೆ" ಎಂದು ಬರೆದುಕೊಟ್ಟಿರುತ್ತಾರೆ. ಎದುರುದಾರರು ನೀಡಿದ ಸಮಜಾಯಿಷಿಯನ್ನು ದೂರುದಾರರು ಮತ್ತು ನೆರಳುಸಾಕ್ಷಿಯು ಅಲ್ಲಗಳೆದಿರುತ್ತಾರೆ.

viii) ತನಿಖಾಧಿಕಾರಿಯವರು ಎದುರುದಾರರಿಗೆ ಶ್ರೀಮತಿ. ಸಿದ್ದಮ್ಮನವರ ಚಿಕಿತ್ಸೆಗೆ ಸಂಬಂಧಪಟ್ಟ ದಾಖಲೆಗಳನ್ನು ಹಾಜರುಪಡಿಸುವಂತೆ ತಿಳಿಸಿದಾಗ ಅವರು ಅವರ ಸಿಬ್ಬಂದಿಯಾದ ಶ್ರೀಮತಿ ಪುಷ್ಪಲತಾ, ಶುಶ್ರೂಕಿರವರ ಮೂಲಕ ಕಡತವನ್ನು ಹಾಜರುಪಡಿಸಿರುತ್ತಾರೆ. ಸದರಿ ದಾಖಲೆಗಳ ಝೆರಾಕ್ಸ್ ಪ್ರತಿಗಳನ್ನು ಪಡೆದು ಜಿಲ್ಲಾ

ಶಸ್ತ್ರಚಿಕಿತ್ಸಕರಿಂದ ದೃಢೀಕರಿಸಿ, ದಾಖಲೆಗಳನ್ನು ಮತ್ತು ಹಾಜರಾತಿ ವಹಿಯನ್ನು ತನಿಖಾಧಿಕಾರಿಯವರು ವಶಪಡಿಸಿಕೊಂಡಿರುತ್ತಾರೆ.

ix) ದೂರುದಾರರು ತನಿಖಾಧಿಕಾರಿಯವರ ಮುಂದೆ ಧ್ವನಿಮುದ್ರಕವನ್ನು ಹಾಜರುಪಡಿಸಿದ್ದು, ಅದರಲ್ಲಿರುವ ಸಂಭಾಷಣೆಯನ್ನು ಲ್ಯಾಪ್‌ಟಾಪ್ ಮೂಲಕ ಕೇಳಿಸಿದಾಗ ಅದರಲ್ಲಿರುವ ಧ್ವನಿಗಳು ಅಸ್ಪಷ್ಟವಾಗಿರುತ್ತವೆ.

x) ತನಿಖಾಧಿಕಾರಿಯವರು ತದ್ರೂಪಿ ಸಿ.ಡಿ. ಆರ್ಟಿಕಲ್–1ರಲ್ಲಿದ್ದ ಸಂಭಾಷಣೆಯನ್ನು ಎದುರುದಾರರ ಮೇಲಾಧಿಕಾರಿಯಾದ ಡಾ॥ ವಿಜಯನರಸಿಂಹರವರಿಗೆ ಕೇಳಿಸಿದಾಗ, ಅವರು ಸದರಿ ಸಂಭಾಷಣೆಯು ಎದುರುದಾರರ ಧ್ವನಿ ಎಂದು ದೃಢೀಕರಿಸಿರುತ್ತಾರೆ. ತನಿಖಾಧಿಕಾರಿಯವರು ಎದುರುದಾರರ ಮಾದರಿ ಧ್ವನಿಯನ್ನು ಪಡೆದುಕೊಂಡು ಅದನ್ನು ಸಿ.ಡಿ.ಗೆ ವರ್ಗಾಯಿಸಿ, ಆ ಸಿ.ಡಿ.ಯನ್ನು ವಶಕ್ಕೆ ಪಡೆದಿರುತ್ತಾರೆ. ದೂರುದಾರರ ಮಾದರಿ ಧ್ವನಿಯನ್ನು ಪಡೆದು ಅದನ್ನು ಲ್ಯಾಪ್‌ಟಾಪ್ ಮೂಲಕ ಸಿ.ಡಿ.ಗೆ ವರ್ಗಾಯಿಸಿ, ಆ ಸಿ.ಡಿ.ಯನ್ನು ತನಿಖಾಧಿಕಾರಿಯವರು ವಶಕ್ಕೆ ಪಡೆದಿರುತ್ತಾರೆ. ನಂತರ, ತನಿಖಾಧಿಕಾರಿಯವರು ಎದುರುದಾರರನ್ನು ದಸ್ತಗಿರಿ ಮಾಡಿ ಸವಿಸ್ತಾರವಾದ ಜಪ್ತಿ ಪಂಚನಾಮೆಯನ್ನು ಎಲ್ಲರ ಸಮಕ್ಷಮ ನಿರ್ವಹಿಸಿರುತ್ತಾರೆ.

xi) ತನಿಖಾಧಿಕಾರಿಯವರು ಎದುರುದಾರರಿಂದ ವಶಪಡಿಸಿಕೊಂಡ ಮುದ್ದೆಮಾಲುಗಳಲ್ಲಿ ಫಿನಾಫ್ತಲಿನ್ ಅಂಶವಿರುವುದು ರಾಸಾಯನಿಕ ತಜ್ಞರ ವರದಿಯಿಂದ ಕಂಡುಬಂದಿರುವುದರಿಂದ ಎದುರುದಾರರು ನೀಡಿದ ಸಮಜಾಯಿಷಿ ಸಮರ್ಪಕವಾಗಿರುವುದಿಲ್ಲ. ತನಿಖಾಧಿಕಾರಿಯವರು ಸಾಕ್ಷಿದಾರರ ಹೇಳಿಕೆ, ತನಿಖಾ ದಾಖಲೆಗಳನ್ನು, ರಾಸಾಯನಿಕ ತಜ್ಞರ ವರದಿಯನ್ನು ಹಾಗೂ ಅಭಿಯೋಜನಾ ಮಂಜೂರಾತಿಯನ್ನು ಪಡೆದು ಎದುರುದಾರರ ವಿರುದ್ಧ ದೋಷಾರೋಪಣ ಪತ್ರವನ್ನು ಸಲ್ಲಿಸಿರುತ್ತಾರೆ.

xii) ದೂರು ಅರ್ಜಿ, ಸಾಕ್ಷಿದಾರರ ಹೇಳಿಕೆಗಳು ಹಾಗೂ ತನಿಖಾಧಿಕಾರಿಯವರು ಸಂಗ್ರಹಿಸಿದ ದಾಖಲೆ, ರಾಸಾಯನಿಕ ವರದಿ ಮತ್ತು ಇತರೆ ಅಂಶಗಳು ಎದುರುದಾರರ ಸತತವಾದ ದುರ್ನಡತೆಯನ್ನು ತೋರಿಸುತ್ತದೆ.

3. ಎದುರುದಾರರಿಗೆ ಪರಿವೀಕ್ಷಣಾ ಟಿಪ್ಪಣಿಯನ್ನು ಕಳುಹಿಸಿದ್ದು, ಸಾಕಷ್ಟು ಕಾಲಾವಕಾಶ ನೀಡಿದರೂ ಎದುರುದಾರರು ಪರಿವೀಕ್ಷಣಾ ಟಿಪ್ಪಣಿಗೆ ಆಕ್ಷೇಪಣೆಗಳನ್ನು ಸಲ್ಲಿಸಿರುವುದಿಲ್ಲ. ಆ ಕಾರಣ ಅವರ ಆಕ್ಷೇಪಣೆಗಳು ಏನೂ ಇಲ್ಲವೆಂದು ಪರಿಗಣಿಸಲಾಗಿದೆ. ಮೇಲ್ಕಂಡ ಎಲ್ಲಾ ಕಾರಣಗಳು ಮತ್ತು ದೋಷಾರೋಪಣ ಪತ್ರದ ದಾಖಲೆಗಳ ಅಂಶಗಳು ಪ್ರಕರಣವನ್ನು ಮುಕ್ತಾಯಗೊಳಿಸಲು ಸೂಕ್ತ ಕಾರಣಗಳಾಗಿ ಕಂಡುಬರುವುದಿಲ್ಲ.

4. ದೂರು ಅರ್ಜಿ, ಸಾಕ್ಷಿದಾರರ ಹೇಳಿಕೆಗಳು, ತನಿಖಾಧಿಕಾರಿ ಸಂಗ್ರಹಿಸಿದ ದಾಖಲೆಗಳು ಹಾಗೂ ದೋಷಾರೋಪಣ ಪತ್ರದಲ್ಲಿರುವ ಮಾಹಿತಿಗಳಿಂದ ಎದುರುದಾರರು ನೀಡಿರುವ ಉತ್ತರಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಎದುರುದಾರರ ವಿರುದ್ಧ ನಡಾವಳಿಯನ್ನು ಕೈಬಿಡಲು ಸೂಕ್ತ / ಸಮಂಜಸ / ಸಮಾಧಾನಕರ ಕಾರಣಗಳನ್ನು ತೋರಿಸಿಲ್ಲವೆಂದು ಅಭಿಪ್ರಾಯಕ್ಕೆ ಬರಲಾಗಿದೆ.

5. ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 2 (12) ರ ಪ್ರಕಾರ ಎದುರುದಾರರು ಸರ್ಕಾರಿ / ಸಾರ್ವಜನಿಕ ನೌಕರರಾಗಿದ್ದು, ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ಕರ್ತವ್ಯದಲ್ಲಿ ನಿಷ್ಠೆ ತೋರಿಸದೆ ಭ್ರಷ್ಟಾಚಾರವೆಸಗಿ ಕ.ನಾ.ಸೇ. (ನಡತೆ) ನಿಯಮಗಳು 1966 ನಿಯಮ 3 (1)(i) ರಿಂದ (iii) (ಪ್ರಸ್ತುತ ಕ.ನಾ.ಸೇ. (ನಡತೆ) ನಿಯಮಗಳು 2021 ನಿಯಮ (i) ರಿಂದ (iv)) ರನ್ವಯ ದುರ್ನಡತೆಯನ್ನು ಎಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ.

6. ಈ ಮೇಲ್ಕಂಡ ಅಂಶಗಳಿಗಾಗಿ ಎದುರುದಾರರಾದ **ಡಾ॥ ಎಸ್.ವಿ. ನಾರಾಯಣಸ್ವಾಮಿ ಬಿನ್ ಲೇಟ್ ವೆಂಕಟರಮಣಪ್ಪ,** ಶಸ್ತ್ರ ಚಿಕಿತ್ಸಕರು, ಜಿಲ್ಲಾ ಆಸ್ಪತ್ರೆ, ರಾಮನಗರ (ನಿವೃತ್ತಿ ದಿ: 30/06/2034)ರವರ ವಿರುದ್ಧ ಶಿಸ್ತು ನಡವಳಿಕೆ ಹೂಡಲು ಮತ್ತು ಇಲಾಖಾ ವಿಚಾರಣೆಯನ್ನು ಮಾಡಲು ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957 ನಿಯಮ 14(ಎ) ರಡಿಯಲ್ಲಿ ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(3) ರನ್ವಯ ಪ್ರದತ್ತವಾದ ಅಧಿಕಾರದಡಿ ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾದೆ.

7. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(4)ರ ಪ್ರಕಾರ ಸಕ್ಷಮ ಪ್ರಾಧಿಕಾರವು ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು

ಸಂ.ಕಂಪ್ಲೇಂಟ್/ಉಪಲೋಕ್/ಬಿ.ಡಿ./2615/2022
ಪಿ.ಓ. ಎ.ಆರ್.ಇ–06

ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ, ಈ ವರದಿಯನ್ನು ಸ್ವೀಕರಿಸಿದ **ಮೂರು ತಿಂಗಳೊಳಗೆ** ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

6/3/23

**(ನ್ಯಾಯಮೂರ್ತಿ ಕೆ.ಎನ್. ಫಣೀಂದ್ರ)**
ಉಪಲೋಕಾಯುಕ್ತರು–02,
ಕರ್ನಾಟಕ ರಾಜ್ಯ, ಬೆಂಗಳೂರು.